Regd. No M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಂಶಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 240 | ಬುಧವಾರ 21—5—47 | ಬಿಡಿ ಪ್ರತಿ 3 ಪೈ

ರಾಜ್ಯಾಂಗ ಸಭೆಗೆ ಮೈಸೂರಿನ ಪ್ರತಿನಿಧಿಗಳಾರು ?

ಭಾರತ ರಾಜ್ಯಾಂಗ ಸಭೆಗೆ ಮೈಸೂರು ಸಂಸ್ಥಾನದಿಂದ ಹೋಗಬೇಕಾಗಿರುವ ಪ್ರತಿನಿಧಿಗಳು ಯಾರು ಎಂಬ ವಿಷಯ ಅನೇಕ ಕಾಲ ಜಿಜ್ಞಾಸೆಯನ್ನುಂಟು ಮಾಡಿಯುತ್ತಲೇ ಬಂದಿತು. ಮೊದಲು ಮೊದಲು—ಮೈಸೂರಿನಿಂದ ರಾಜ್ಯಾಂಗ ಸಭೆಗೆ ಹೋಗುವ ಏಳು ಜನ ಪ್ರತಿನಿಧಿಗಳೂ ಶ್ರೀ ಮನ್ಮಹಾರಾಜರಿಂದ ನಾಮಕರಣ ಮಾಡಲ್ಪಟ್ಟವರಾಗಿರಬೇಕೆಂದೂ—ಇವರು ರಾಜ್ಯಾಂಗ ಸಭೆಗೆ ಹೋಗಬೇಕೆಂದೂ ವಾದ ವಿವಾದಗಳು ನಡಿಯುತ್ತಲೇ ಬಂದವು. ಕಡೆಕಡೆಗೆ ರಾಜ್ಯಾಂಗ ಸಭೆಗೆ ಪ್ರಜೆಗಳಿಂದ ಚುನಾಯಿತರಾದ ಸದಸ್ಯರು ಹೋಗುವಂತೆ ಒತ್ತಾಯ ಪಡಿಸುವ ಅಭಿಪ್ರಾಯ ಸಾರ್ವತ್ರಿಕವಾಗಿಯೂ ಒತ್ತಾಯಮಾಡಲ್ಪಟ್ಟಿತು. ಕಡೆಕಡೆಗೆ ನಮ್ಮ ಮಾನ್ಯ ದಿವಾನರವರಾದ ಸರ್ ಆಕರ್ಾಟ್ ರಾವ್ ಸಾಹೆಬ್ ಮೊದಲಿಯಾರ್‌ರವರು ಮೈಸೂರಿನಿಂದ ರಾಜ್ಯಾಂಗ ಸಭೆಗೆ ಹೋಗುವವರು ಚುನಾಯಿತರಾದ ಪ್ರಜಾಪ್ರತಿನಿಧಿಗಳಾಗಿದ್ದರೆ ಉತ್ತಮವೆಂಬ ಅಮೂಲ್ಯ ಅಭಿಪ್ರಾಯವನ್ನೂ ಪ್ರತಿಪಾದಿಸಿ ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಟ್ಟರು.

ಸರ್ ಆಕರ್ಾಟರು ರಾಷ್ಟ್ರೀಯ ಧುರೀಣರು. ಅಂತರ ರಾಷ್ಟ್ರೀಯ ರಾಜಕೀಯ ವೃತ್ತಗಳಲ್ಲಿ ಮಹಾವ್ಯಕ್ತಿಗಳಿಂದ ಮನ್ನಣೆ ಹೊಂದಿರುತ್ತಾರೆ. ದೇಶೀಯ ಸಂಸ್ಥಾನಗಳಲ್ಲಿ ನವೀನ ಕಾಲಕ್ಕೆ ಅಗತ್ಯವಾಗಿ ಸುಧಾರಣೆಗಳ ಬಗ್ಗೆ ಅತ್ಯಂತ ತೀವ್ರಾಸಕ್ತಿಯನ್ನು ಹೊಂದಿರುತ್ತಾರೆ. ಭರತಖಂಡದ ಗಣ್ಯ ವಂಶಿಗಳ ಶ್ರೇಣಿಯಲ್ಲಿ ಅತ್ಯಂತ ಮೇಧಾವಿಗಳಾಗಿರುತ್ತಾರೆ. ಸತ್ಯ, ದಯೆ, ಸರಳಭಾವ, ಪ್ರಜಾವತ್ಸಲತೆ, ರಾಜಭಕ್ತಿಗಳಲ್ಲಿ ಇವರು ಚಿತ್ತವೃತ್ತಿಯುಳ್ಳವರಾಗಿರುತ್ತಿರಿ ನಮ್ಮ ಭರತಖಂಡದಲ್ಲಿ ರಾಜಕೀಯ ಬದಲಾವಣೆಗಳಾಗುತ್ತಿರುವ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಪ್ರಜಾಭಿಪ್ರಾಯವನ್ನೂ ರಾಜಾಭಿಪ್ರಾಯವನ್ನೂ ಸಮದೂಗುವ ದಕ್ಷತೆಯನ್ನು ಹೊಂದಿರುತ್ತಾರೆ.

ಈಗ ರಾಜ್ಯಾಂಗ ಸಭೆಗೆ ಮೈಸೂರು ದೇಶದ ಯೋಗ್ಯ ಅರ್ಹರಾದ ಮಿಕ್ಕ ಜನ ಯಾರು ? ಅವರ ಸ್ಥಾನವೂ ಅರ್ಹತೆಗಳು ಯಾವುವು ? ಎಂಬೀ ವಿಷಯ ಸಂಕ್ಷೇಪವಾಗಿ ಕೆಲವು ಅಂಶಗಳನ್ನು ಗ್ರಹಿಸುವುದೂ ಸಕಾಲವಾಗಿದೆ.

ನಮ್ಮ ಶ್ರೀಮನ್ಮಹಾರಾಜಾದಿ ಮಂತ್ರಿಗಳಾಗಿದ್ದು ಶ್ರೀಮನ್ಮಹಾರಾಜರ ಸ್ಥಾನಮಾನಗಳನ್ನು ಕಾದು ಕಾಪಾಡುವುದಕ್ಕೂ ಶ್ರೀಮನ್ಮಹಾರಾಜರವರ ಪರವಾಗಿ ನೇರವಾದ ಪ್ರತಿನಿಧ್ಯವನ್ನು ಪಡಿಸಲು ಮಾನ್ಯ ದಿವಾನರವರು ಓರ್ವ ಪ್ರತಿನಿಧಿಯಾಗಿ ಭಾರತ ರಾಜ್ಯಾಂಗ ಸಭೆಗೆ ಹೋಗಬೇಕಾಹುದು ಉಚಿತ. ಇನ್ನು ಪ್ರಜೆಗಳಿಂದ ಚುನಾಯಿತರಾಗುವ ಮೂರು ಜನರು ನಮ್ಮ ಸಂಸ್ಥಾನದ ಪ್ರಮುಖ ರಾಜಕೀಯ ಪಂಗಡಗಳಿಗೆ ಸೇರಿದವರಾಗಿಯೂ ಜನಪ್ರಿಯರಾಗಿಯೂ ರಾಜ್ಯಾಂಗ ಸಭೆಗೆ ಉಮೇದುವಾರರಾಗಲು ವಿಧಾಯಕವಾದ ಅರ್ಹತೆಗಳನ್ನು ಹೊಂದಿದವರಾಗಿಯೂ ಇರಬೇಕಾಗುತ್ತದೆ. ರಾಜ್ಯಾಂಗ ಸಭೆಗೆ ಉಮೇದುವಾರರನ್ನು ನ್ಯಾಯವಿಧಾಯಕ ಸಭೆಯಿಂದ ಮತ್ತು ಪ್ರಜಾಪ್ರತಿನಿಧಿ ಸಭೆಯಿಂದ ಚುನಾಯಿಸದೆ ಸಾರ್ವತ್ರಿಕ ಚುನಾವಣೆಯ ಮೂಲಕ ಚುನಾಯಿಸುವಂತೆ ಏರ್ಪಡಿಸುವುದೂ ಜನಸಮ್ಮತವಾಗಿ ಕಾಲೋಚಿತವಾಗಿರುವುದು.

ಜೆ. ಸ್ವಾಮಿದಾಸ್
ಪ್ರಜಾಹಿತೈಷಿ

ಫ್ರಾಂಕೋ ಕೊಲೆ ಪ್ರಯತ್ನವೇ !

ಅರಮನೆ ಸುದ್ದಿ

ಮೈಸೂರು, ಮಂಗಳವಾರ ಮೇ 20, 1947— ಈ ದಿವಸ ಶ್ರೀಮನ್ಮಹಾರಾಜರವರು ಮಿ || ಎಮ್ ನೂರ್ ಹುಸೇನಂಗೆ ಭೇಟಿ ದಯಪಾಲಿಸಿದರು.

ವಿವಿಧ ವರ್ತಮಾನ

ಬೆಂಗಳೂರು, ಮೇ 20 — ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ತಾ || 25 ರಲ್ಲಿ ನಡೆಯುವುದು.

ಲಾಹೋರ್, ಮೇ 19 — ಭಾರತವನ್ನು ಭಾರತೀಯರ ಜಾಮೀನುತನವಿಲ್ಲದೆ ವಿಭಜಿಸಬೇಡಿರೆಂದು ಹಿಂದೂ ಮಹಾಸಭೆ ಕಾರ್ಯದರ್ಶಿ ಕೋರಿದ್ದಾರೆ.

ಲಂಡನ್, ಮೇ 18 — ಹಿಂದೂಸ್ಥಾನದಲ್ಲಿ ಪ್ರಥಮ ಬ್ರಿಟೀಷ್ ರಾಯಭಾರಿಯಾಗಿ ಲಾರ್ಡ್ ಲಿಶ್ವೂವೆಲ್ಲರು ನೇಮಿಸಲ್ಪಡವರೆಂದೂ ಲಂಡನ್ ಪತ್ರಿಕೆ ಪ್ರಕಟಿಸಿದೆ

ಲಂಡನ್, ಮೇ 18 — ಭಾರತ ಸೇನೆಯನ್ನು ವಿಭಾಗ ಮಾಡುವ ವಿಷಯದಲ್ಲಿ ಮಂತ್ರಿಮಂಡಲಕ್ಕೆ ಇಚ್ಛೆ ಇಲ್ಲ. ಸೈನ್ಯದ ಐಕ್ಯತೆ ಉಳಿಸಲು ವೈಸರಾಯರಿಗೆ ಇಚ್ಛೆಯೆಂದು ಸಂಪುಲಾಗಿದೆ.

ಇಂಡಿಯಾ ಕಾಫೀ ಬೋರ್ಡು

ಈ ಸಂಸ್ಥೆಯ ಮಾರ್ಚಿ ಮಾಹೆಯ ಪತ್ರಿಕೆಯಲ್ಲಿ ಹೀಗೆ ಹೇಳಿದೆ—

1 ಕಾಫಿಯನ್ನು ನಿಂತುಕೊಂಡು ಕುಡಿದಲ್ಲಿ ಅದು ದುರ್ದೈವ ಸೂಚಕವೆಂದು ಡೊಮಿನಿಯನ್ ಪಬ್ಲಿಕ್‌ನಲ್ಲಿ ಭಾವಿಸಲ್ಪಟ್ಟಿರುವುದು.

2 ಒಳ್ಳೇ ಕಾಫಿಯು ಪ್ರಥಮ ಚುಂಬನದಂತೆ ಸಿಹಿಯಾಗಿರಬೇಕು, ತೃತೀಯ ಚುಂಬನದಂತೆ ಶಕ್ತಿಯುತವಾಗಿರಬೇಕು, ನರಕದಂತೆ ಬಿಸಿಯಾಗಿರಬೇಕು (Good Coffee should be 'Sweet as the first kiss, strong as the third kiss, hot as hell')

ಇಂದಿನ ವರ್ತಮಾನ

ವೆಂಡ್ರಿಡ್ ಮೇ 19 — ಬಾರ್ಸಿಲೋನಾದ ಮಿಲಟರಿ ಗೌರ್ನರುಗಳ ಆಫೀಸಿಗೆ ಜನರಲ್ ಫ್ರಾಂಕೋ ಭೇಟಿ ಕೊಡುವ ಸಮಯದಲ್ಲಿ ಒಂದು ಬಾಂಬು ಸ್ಫೋಟವಾಯಿತು. ಸಾವು ನೋವು ಏನೂ ಆಗಿಲ್ಲ. ಕಟ್ಟಡಕ್ಕೆ ಸ್ವಲ್ಪ ಏಟು ಬಿದ್ದಿದೆ.

ನವದೆಹಲಿ, ಮೇ 20 — ಜಿನ್ನರು ಬೆಲೂಚಿಗಳಿಗೆ ಕಳುಹಿಸಿದ ಸುದೇಶವಲ್ಲಿ 'ಪಾಕೀಸ್ತಾನವು ಹತ್ತಿರವಾಗುತ್ತಿದೆ ಬೆಲೂಚಿಸ್ತಾನವು ಅದರ ಒಂದು ಭಾಗವಾಗಿರುವುದು' ಎಂದು ತಿಳಿಸಿರುವರು.

ಲಂಡನ್ ಮೇ 18 — ತನ್ನ ರಾಜ್ಯದಲ್ಲಿ ಹಕ್ಕು ಪಡೆದಿರ ಬ್ರಿಟೀಷ್ ಸೈನಿಕರನ್ನಿಡಬೇಕೆಂದು ನಿಜಾಮರವರು ಪ್ರಾರ್ಥಿಸಿದರೆಂದೂ ಅದು ನಿರಾಕರಿಸಲ್ಪಟ್ಟಿತೆಂದೂ ಹೇಳಲಾಗಿದೆ. ಸರ್ ವಿ. ಜಿ. ರವರು ಹೈದ್ರಾಬಾದು ಮಂತ್ರಿ ಪದವಿ ಬಿಟ್ಟಿರುವುದರಿಂದ ಹೈದರಾಬಾದು ಪಾಕಿಸ್ತಾನಕ್ಕೆ ಸೇರಲು ನಿಜಾಮರ ಇಚ್ಛೆ ಆಗಿದೆ ಎಂದು ಹೇಳಲಾಗಿದೆ.

ಕಲ್ಕತ್ತಾ, ಮೇ 20 — ಈ ದಿನದ ದುರಂತಗಳಲ್ಲಿ ಐದು ಸಾವು ಇಪ್ಪತ್ತೊಂದ ನೋವು ಆಗಿದೆ.

ತ್ರಿಚೂರು ಮೇ 19 — ಬಂಗಾಳ ಪಂಜಾಬುಗಳ ವಿಭಜನೆ ಇಲ್ಲದೆ ಪಾಕೀಸ್ತಾನವಿಲ್ಲವೆಂದು ರಾಜೇಂದ್ರ ಪ್ರಸಾದರು ಹೇಳಿರುವರು

ಕಾಸ್ಟೆಂಬಾ, ಮೇ 20 — ಪ್ರಪಂಚ ಆಹಾರ ಕೌನ್ಸಿಲ್ಲಿನವರು ಭಾರತದಿಂದ ಆಸ್ಟ್ರೇಲಿಯಾಕ್ಕೆಂದು ನಿಗಡಿ ಮಾಡಿರುವ ಹತ್ತೀ ಬೀಜದ ಎಣ್ಣೆಯನ್ನು ಭಾರತ ಕೊಡದಿದ್ದರೆ, ಆಸ್ಟ್ರೇಲಿಯವು ಭಾರತಕ್ಕೆ ಗೋಧಿ ಕೊಡುವುದಿಲ್ಲವೆಂದು ಬೆದರಿಸಿದೆ.

ತ್ರೀಸಗರ ಮೇ 19 — ಆ ಚಾರ್ಯ ಕೃಪಾಲಿನಿಯವರು ಕಪೂರ್ಥಲಾ ರಾಜರ ಅತಿಥಿಗಳಾಗಿದ್ದರು. ರಾಜರೊಡನೆ ಉಪಸಂಹಾರ ಸ್ವೀಕರಿಸಿ ಪಂಜಾಬು ಪುನರ್ಸಂಸ್ಥಾನ ಮತ್ತು ಪಾಜಾಬು ಮತ್ತು ಭಾರತ ವಿಭಜನೆ ಒಗ್ಗೆ ಮಾತುಕತೆ ನಡೆಸಿದರೆಂದು ತಿಳಿಯುಬಂದಿದೆ.

ರಾಜಮಹೇಂದ್ರ ಮೇ 18 — ಆದಾಯ ಮಂತ್ರಿ ಶ್ರೀ ಕಾಲಾ ವೆಂಕಟರಾಯರು ವಿದಾಯಸಿನಿಂದ ಅಮೂಲಾವುಂಕ್ಕೆ ಹೊಂಟು ಇಲ್ಲಿಗೆ ಬಂದಾಗ ಅವರು ಉದ್ದ ಕಪ್ಪು ಬಾವುಟ ಪ್ರದರ್ಶನ ಬೈಗಳ ಸುರಿಮಳೆ ಜೋಡು ಕಲ್ಲು ಎಸೆಯಲ್ಪಟ್ಟವು.

ಪಾಕೀಸ್ತಾನ ಅಸಾಧ್ಯ

ಷಿಲಾಂಗ್, ಮೆ 19 — ಅಸ್ಸಾಂ ಪಾಕೀಸ್ತಾನದ ಒಂದು ಭಾಗ; ಪಾಕೀಸ್ತಾನ ಅಡಳಿತೆಗೆ ಅಲ್ಲಿನ ಪ್ರಚಾರವೆಂಬ ಲವಿದೆ ಎಂದು ಕೇಂದ್ರ ಸರ್ಕಾರದ ಸಚಿವ ಮಿ॥ ಜುಂದ್ರಿಗರ್ ಲಂಡನ್ನಿನಲ್ಲಿ ಹೇಳಿರುವುದನ್ನು, ಅಸ್ಸಾಂ ಪ್ರಧಾನಿ ಶ್ರೀ ಗೋಗೆನಾಥ ಬಾರ್ಡೋಲಿ ನಿರಾಕರಿಸಿ ಅಲ್ಲಿ ಪಾಕೀಸ್ತಾನ ಸ್ಥಾಪನೆ ಅಸಾಧ್ಯವೆಂದಿದ್ದಾರೆ.

ಅಕ್ಕರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ವಿಮಾನ ಮೂಲಕ ಗೋಧಿ ಬಿತ್ತುತ್ತಿರುವ ಚಿತ್ರ

ಬ್ರಿಟೀಷ್ ಸರ್ಕಾರದ ನಿವೃತ್ತ ವೇತನ ಸಚಿವರು

Edited, Printed and Published by **M. S** Krishna Rao at the Satyavadi Press Chamaraj Agrahar, Mysore.

At Opera

5 ನೇ ವಾರ

ಟಿ. ಎಸ್. ಬಾಲಯ್ಯ, ತಪಮಣಿದೇವಿ, ಮಾಲತಿ, ರಾಮಚಂದ್ರ ನಟಿಸಿರುವ

ರಾಜಕುಮಾರಿ

(ತಮಿಳು)

ಶ್ರೀ "ಓಂ" ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೆಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಆರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೈವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ.

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.